# ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,
# ಪಾಂಡವಪುರ

## ಸಿಸಿ.ನಂ. 176/2020

| | | | |
|---|---|---|---|
| ಸಾಕ್ಷಿದಾರರು | : | ಗೇವರ್ ಚಂದ್ | ಸಿ.ಡಬ್ಲ್ಯೂ : 9 |
| ತಂದೆ ಹೆಸರು | : | ಊರ್ ಚಾರಾಮ್ ಜೀ | ಪಿ.ಡಬ್ಲ್ಯೂ : 4 |
| ವಯಸ್ಸು | : | 62 ವರ್ಷ | |
| ವೃತ್ತಿ | : | ಪಾನ್ ಬ್ರೋಕರ್ , ಮಂಡಿಮೊಹಲ್ಲಾ, ಮೈಸೂರು | |
| ವಾಸ ಸ್ಥಳ | : | ಮಂಡಿಮೊಹಲ್ಲಾ, ಮೈಸೂರು | |

**ಸಾಕ್ಷಿಯನ್ನು ದಿಃ 25.11.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ದಿಃ 13.09.2011ರ ಒಂದು ಪಂಚನಾಮೆಯನ್ನು ಸಾಕ್ಷಿಗೆ ತೋರಿಸಿದ್ದು, ಅದರಲ್ಲಿದ್ದ ಸಹಿ ತನ್ನದು ಎಂದು ಗುರುತಿಸಿಕೊಂಡಿರುವುದರಿಂದ ಸದರಿ ದಾಖಲೆಯನ್ನು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5 ಎ ಎಂದು ಗುರ್ತಿಸಲಾಯಿತು. ಯಾವಾಗ ಆ ದಾಖಲೆಗೆ ಸಹಿ ಮಾಡಿರುತ್ತೇನೆಂದು ನನಗೆ ನೆನಪಿಲ್ಲ. ಈಗ್ಗೆ 10 ವರ್ಷಗಳಿಂದ ಮೈಸೂರಿನ ಮಂಡಿ ಮೊಹಲ್ಲಾದ ಬಿ ಎನ್ ಸ್ಟ್ರೀಟ್ ನಲ್ಲಿ ಗೇವರ್ ಚಂದ್ ಪಾನ್ ಬ್ರೋಕರ್ ಅಂಗಡಿ ನಡೆಸುತ್ತಿದ್ದೇನೆ. ಪೊಲೀಸರು ಈಗ್ಗೆ 10 ವರ್ಷಗಳ ಹಿಂದೆ ಅಂಗಡಿ ಹತ್ತಿರ ಬಂದು ಸಾಕ್ಷಿ ಹಾಕಿ ಎಂದು ಒಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡರು. ನಿಪಿ.3, 4 ರಲ್ಲಿರುವ

ಒಡವೆಗಳನ್ನು ನಾನು ಈ ಹಿಂದೆ ನೋಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಈ ಮೊದಲು ನೋಡಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ. ಈ ಪ್ರಕರಣದ ಬೇರೆ ವಿಚಾರಗಳು ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಎಪಿಪಿ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಎಪಿಪಿ ರವರಿಂದಃ**

3. ದಿಃ 13.09.2011 ರಂದು ಮದ್ಯಾಹ್ನ 12.15 ಗಂಟೆಗೆ ನಿಮ್ಮ ಅಂಗಡಿಗೆ ಸೈಯದ್ ವಸೀಂ, ಸಮೀರ್ ಖಾನ್, ಸಮೀ ಉಲ್ಲಾ ಎಂಬ ಆರೋಪಿಗಳನ್ನು ಮೈಸೂರು ನಗರದ ಸಿ ಸಿ ಬಿ ಘಟಕದ ಪೊಲೀಸರು ಕರೆದುಕೊಂಡು ಬಂದು, ಇಬ್ಬರು ಪಂಚರ ಸಮಕ್ಷಮ ಪಾಂಡವಪುರದ ಜುವೆಲರಿ ಅಂಗಡಿಯ ಬೀಗ ಮುರಿದು ಕಳ್ಳತನ ಮಾಡಿದ್ದ ಬೆಳ್ಳಿ ಪಾದಾರ್ಥಗಳನ್ನು ಮೈಸೂರಿನ ಒಂದು ಮನೆಯಲ್ಲಿ ಕಳ್ಳತನ ಮಾಡಿದ್ದ ಚಿನ್ನದ ಸರವನ್ನು, ನಿಮಗೆ ಮಾರಾಟ ಮಾಡಿರುತ್ತಾರೆಂದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನೀವು ಪೊಲಪೀಸರಿರಿಗೆ ಆರೋಪಿಗಳು ಮಾರಾಟ ಮಾಡಿದ್ದ ಒಂದು ಲಕ್ಷ್ಮಿ ದೇವರ ಬೆಳ್ಳಿಯ ಮುಖವಾಡದ ತೂಕ 50 ಗ್ರಾಂ, ಒಂದು ಜೊತೆ ಬೆಳ್ಳಿಯ ದೀಪ ತೂಕ 40 ಗ್ರಾಂ, ತಲಾ 20 ಗ್ರಾಂ ತೂಕವಿರುವ ಮೂರು ಜೊತೆ ಬೆಳ್ಳಿಯ ದೀಪಗಳು, ತಲಾ 30 ಗ್ರಾಂ

ತೂಕವಿರುವ ಎರಡು  ಜೊತೆ ಬೆಳ್ಳಿಯ ದೀಪಗಳು, ತಲಾ 20 ಗ್ರಾಂ ತೂಕವಿರುವ 10 ಬೆಳ್ಳಿಯ ಕತ್ತಿನ ಚೈನುಗಳು, ತಲಾ 20 ಗ್ರಾಂ ತೂಕವಿರುವ 5 ಜೊತೆ ಬೆಳ್ಳಿಯ ಕಾಲು ಚೈನುಗಳು, ತಲಾ 25 ಗ್ರಾಂ ತೂಕವಿರುವ 15 ಜೊತೆ ಬೆಳ್ಳಿಯಿ ಕಾಲು ಚೈನುಗಳು, ತಲಾ 30 ಗ್ರಾಂ ತೂಕವಿರುವ ಎರಡು ಜೊತೆ ಬೆಳ್ಳಿಯ ಕಾಲು ಚೈನುಗಳು, ತಲಾ 30 ಗ್ರಾಂ ತೂಕವಿರುವ 5 ಜೊತೆ ಕಾಲುಮುರಿಗಳು, ತಲಾ 20 ಗ್ರಾಂ ತೂಕವಿರುವ ಮೂರು ಜೊತೆ ಬೆಳ್ಳಿಯ ಬಟ್ಟಲುಗಳು, ತಲಾ 5 ಗ್ರಾಂ ತೂಕವಿರುವ 5 ಜೊತೆ ಬೆಳ್ಳಿ ಬಟ್ಟಲುಗಳು, ತಲಾ 30 ಗ್ರಾಂ ತೂಕವಿರುವ 2 ಜೊತೆ ಜೊತೆ ಬೆಳ್ಳಿ ಬಟ್ಟಲುಗಳು, ತಲಾ 15 ಗ್ರಾಂ ತೂಕವಿರುವ ನಾಲ್ಕು ಜೊತೆ ಬೆಳ್ಳಿಯ ದೀಪಗಳು, 7 ಗ್ರಾಂ 990 ಮಿಲಿ ತೂಕದ ಒಂದು ಚಿನ್ನದ ಅಂಜಲಿ ಕಂಟಿಂಗ್ ನ ಚೈನು, ಅವುಗಳನ್ನು ಪೊಲೀಸರ ಮುಂದೆ ಹಾಜರು ಪಡಿಸಿರುತ್ತೀರಾ ಎಂದರೆ ಸರಿಯಲ್ಲ. ಸದರಿ ಮಾಲುಗಳು ಕಳ್ಳತನಕ್ಕೆ ಸಂಬಂಧಿಸಿದ ಮಾಲುಗಳು ಎಂದು ಪೊಲೀಸರು ನಿಪಿ.5 ನ್ನು ಬರೆದು ಇಬ್ಬರು ಪಂಚರ ಸಮಕ್ಷಮ ವಶ ಪಡಿಸಿಕೊಂಡರು ಎಂದರೆ ಸರಿಯಲ್ಲ.

4. ದಿಃ 13.09.2011 ರಂದು ಈ ಘಟನೆ ಕುರಿತಾಗಿ ಪೊಲೀಸರ ಮುಂದೆ ವಿವರವಾದ ಹೇಳಿಕೆ ನೀಡಿರುತ್ತೀರಾ ಎಂದರೆ ಸರಿಯಲ್ಲ. ಸಾಕ್ಷಿಗೆ ಅರ್ಥವಾಗುವಂತೆ ಹೇಳಿಕೆ ಸಂಗತಿಗಳನ್ನು ವಿವರವಾಗಿ ಓದಿ ಹೇಳಿದ್ದು, ಸಾಕ್ಷಿ ಅದರಲ್ಲಿದ್ದ ಸಂಗತಿಗಳನ್ನು ಸಂಪೂರ್ಣವಾಗಿ ನಿರಾಕರಿಸಿರುವುದರಿಂದ ಸಂಪೂರ್ಣ ಹೇಳಿಕೆಯನ್ನು ನಿಪಿ.6 ಎಂದು

ಗುರುತಿಸಲಾಯಿತು. ಆರೋಪಿಗಳೊಂದಿಗೆ ಈಗ ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ರಾಜಿ ಮಾಡಿಕೊಂಡಿರುವುದರಿಂದ ಆರೋಪಿಗಳ ಪರವಾಗಿ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮಗೆ ಪ್ರಕರಣದ ಎಲ್ಲಾ ವಿಚಾರಗಳು ಗೊತ್ತು ಎಂದರೆ ಸರಿಯಲ್ಲ. ಆರೋಪಿಗಳಿಗೆ ಅನುಕೂಲ ಮಾಡಿ ಕೊಡಲು ಸುಳ್ಳು ಸಾಕ್ಷಿ ನುಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 2 ನೇ ಆರೋಪಿತರ ಪರ ವಕೀಲರಿಂದಃ– ಇಲ್ಲ**

**ಮರು ವಿಚಾರಣೆ ಇಲ್ಲ.**

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು***
***ಜೆ.ಎಂ.ಎಫ್.ಸಿ., ಪಾಂಡವಪುರ.***